ಸಿ.ಸಿ. ನಂಬರ 156/2016

ಪಿಡಬ್ಲ್ಯೂ-1

ಸಾಕ್ಷಿದಾರರಿಗೆ ಇಂದು ದಿನಾಂಕಃ 12-01-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ 5 ರಿಂದ 9 ನೇ ಆರೋಪಿಗಳ ಪರ ಶ್ರೀಮತಿ ಎ.ಎಸ್.ಎಸ್.(ಬಿ) ವಕೀಲರಿಂದಃ**

ನಮ್ಮ ಲೋಟಸ್ ಶಿಕ್ಷಣ ಸಂಸ್ಥೆಯನ್ನು 1991 92 ನೇ ಇಸ್ವಿಯಲ್ಲಿ ನೊಂದಾಯಿಸಿಕೊಂಡು ಪ್ರಾರಂಬಿಸಿರುತ್ತೇವೆ. ಆ ಸಮಯದಲ್ಲಿ ನಾನು ಕೇಂದ್ರ ಸರಕಾರದ ನೌಕರಿಯಲ್ಲಿ ಇರಲಿಲ್ಲ. ನಾನು 1985 ನೇ ಇಸ್ವಿಯಿಂದ 2008 ನೇ ಇಸ್ವಿಯವರೆಗೆ ರೇಲ್ವೆ ಇಲಾಖೆಯಲ್ಲಿ ನೌಕರಿ ಮಾಡುತ್ತಿದ್ದೆನು. ನಾನು ಮೇಲೆ ಹೇಳಿದ ಶಿಕ್ಷಣ ಸಂಸ್ಥೆಯಲ್ಲಿ correspondent ಹುದ್ದೆಯನ್ನು ಅಲಂಕರಿಸಿದ್ದೆನು. ಆ ಸಮಯದಲ್ಲಿ ಸದ್ರಿ ಸಂಸ್ಥೆಯ ಅಧ್ಯಕ್ಷರು ಶ್ರೀಮತಿ ಶಿವಲಿಂಗಮ್ಮ ಮಡ್ಡಿ ಎಂಬುವರು ಇದ್ದರು. ಆ ಸಮಯದಲ್ಲಿ ಉಪಾಧ್ಯಕ್ಷರು ಯಾರು ಇದ್ದರು ಎಂದು ನನಗೆ ನೆನಪಿರುವುದಿಲ್ಲ. ಸದ್ರಿಯದರಲ್ಲಿ ಕಾರ್ಯದರ್ಶಿಯವರ ಹುದ್ದೆಯನ್ನು ಶ್ರೀಮತಿ ಕಮಲಾ ಎಂಬುವರು ನಿರ್ವಹಿಸುತ್ತಿದ್ದರು. ಅಧ್ಯಕ್ಷರಾಗಿದ್ದ ಶಿವಲಿಂಗಮ್ಮ ಮಡ್ಡಿ ಎಂದರೆ ನನ್ನ ಹೆಂಡತಿ. ಸದ್ರಿಯವರು ಆ ಸಮಯದಲ್ಲಿ ಸರಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದರು ಎಂದರೆ ಸರಿಯಲ್ಲ. ಸದ್ರಿಯವರು ಜುಲೈ 1994 ರಲ್ಲಿ ನೇಮಕವಾಗಿರುತ್ತಾರೆ. ಸದ್ರಿಯವರು ಮೇಲೆ ಹೇಳಿದ ಸಂಸ್ಥೆಯಲ್ಲಿ 1994 ನೇ ಇಸ್ವಿಯವರೆಗೆ ಅಧ್ಯಕ್ಷರಾಗಿದ್ದು ಅದೇ ಇಸ್ವಿಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ನಂತರ ಗೌರವ ಕಾರ್ಯದರ್ಶಿಗಳಾಗಿ ನೇಮಕ ಹೊಂದಿರುತ್ತಾರೆ. ಈ ಮೊದಲು ಕಾರ್ಯದರ್ಶಿಯಾಗಿದ್ದಂತಹ ಶ್ರೀಮತಿ ಕಮಲಾ ಎನ್ನುವವರು ನನ್ನ ಸಹೋದರಿ. ನಾನು ಸದ್ರಿ ಸಂಸ್ಥೆಯಲ್ಲಿ ಕಾರ್ಯದರ್ಶಿಯಾಗಿ 2008 ನೇ ಇಸ್ವಿಯಲ್ಲಿ ಕಾರ್ಯ ನಿರ್ವಹಿಸಿರುತ್ತೇನೆ. ನಮ್ಮ ಸಂಸ್ಥೆಯು ಸರಕಾರದಿಂದ ಅನುದಾನವನ್ನು ದಿಃ 26-05-2009 ರಂದು ಪಡೆದಿರುತ್ತದೆ. ನಾವು ಆರೋಪಿತರನ್ನಾಗಿ ಮಾಡಿದಂತಹ 1 ರಿಂದ 8 ನೇಯವರು ನಮ್ಮ ಸಂಸ್ಥೆಯಲ್ಲಿ ಶಿಕ್ಷಕರಾಗಿದ್ದರು. 9 ನೇ ಆರೋಪಿತರು ಬೋಧಕೇತರ ಸಿಬ್ಬಂದಿಯಾಗಿದ್ದರು. ಸದ್ರಿಯವರೆಲ್ಲರೂ ದಿಃ 26-05-2009 ರಿಂದ ಅನುದಾನಿತ ಶಿಕ್ಷಕರು ಹಾಗೂ ಸಿಬ್ಬಂದಿ ಎಂದರೆ ನಿಜ. ಆರೋಪಿತರು ಎರಡು ಹಾಜರಾತಿ ಪುಸ್ತಕಗಳನ್ನು ಮೆಂಟೆನ್ ಮಾಡಿದ್ದು, ಅದರಲ್ಲಿ ಒಂದು ದಿಃ 01-03-2008 ರಿಂದ ದಿಃ 29-01-2010 ಮತ್ತು ಇನ್ನೊಂದು ದಿಃ 01-03-2008 ರಿಂದ 31-01-2010 ಇರುತ್ತವೆ. ಆರೋಪಿತರು ಸದ್ರಿ ರಜಿಸ್ಟರಗಳನ್ನು ಮೆಂಟೆನ್ ಮಾಡಿದುದರ ಕುರಿತು ನಾನು ಬಿ.ಇ.ಓ. ರವರಿಗೆ, ಡಿಡಿಪಿಐ ರವರಿಗೆ ಮತ್ತು ಕಮೀಷನರ್ ರವರಿಗೆ ಮಾಹಿತಿ ತಿಳಿಸಿರುತ್ತೇನೆ. ಆ ರೀತಿ ಮಾಹಿತಿ ಕೊಟ್ಟ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ. ನಾವು ಸದ್ರಿಯವರಿಗೆ ಮಾಹಿತಿ ಕೊಟ್ಟ ನಂತರ ಬಿ.ಇ.ಓ. ರವರನ್ನು ದಿಃ 13-02-2012 ರಲ್ಲಿ ಬಿ.ಇ.ಓ. ರವರು ಎನ್‌ಕ್ವಾಯರಿ ವರದಿಯನ್ನು ಸಲ್ಲಿಸಿರುತ್ತಾರೆ. ಸದ್ರಿ ವರದಿಯ ಮೇಲೆ ಆರೋಪಿತರ ವಿರುದ್ಧ ಏನು ಕ್ರಮ ಜರುಗಿಸಲಾಗಿದೆ ಎಂದರೆ ಸಾಕ್ಷಿಯು ಸದ್ರಿ ವರದಿಯನ್ನು ಸಲ್ಲಿಸುವುದಕ್ಕಿಂತ ಮುಂಚೆ ಪ್ರಸ್ತುತ ನ್ಯಾಯಾಲಯದಲ್ಲಿ ಪ್ರಸ್ತುತ ಖಾಸಗಿ ಫಿರ್ಯಾದಿಯು ಚಾಲ್ತಿಯಲ್ಲಿತ್ತು ಎಂದು ನುಡಿದಿರುತ್ತಾರೆ. ಬಿ.ಇ.ಓ. ರವರು ತಮ್ಮ ವರದಿಯನ್ನು ಕಮಿಷನವರ್ ರವರಿಗೆ ಸಲ್ಲಿಸಿದ್ದು ಅದರ ಪ್ರತಿಗಳನ್ನು ಎಲ್ಲ ಸಿಬ್ಬಂದಿಯವರಿಗೆ ಕೊಟ್ಟಿರುತ್ತಾರೆ. ಬಿ.ಇ.ಓ. ರವರ ವರದಿಯನ್ವಯ ಕಮಿಷನರ್ ಕಚೇರಿಯಿಂದ ಯಾವುದೇ ವಿಚಾರಣೆ ಆಗಿರುವುದಿಲ್ಲ. ಸದ್ರಿ ಕಮಿಷನರ್ ಕಚೇರಿಯಿಂದ ಪ್ರತ್ಯೇಕ ವಿಚಾರಣೆಯಾಗಿ ಆರೋಪಿತರು ನಿರ್ದೋಶಿ ಎಂದು ಆಗಿರುತ್ತದೆ ಎಂದರೆ ಸಾಕ್ಷಿಯು ಶಿಕ್ಷಣ ಇಲಾಖೆಯಿಂದ ಯಾವುದೇ

ತೀರ್ಪನ್ನು/ನಿರ್ಧಾರವನ್ನು ತೆಗೆದುಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಮುಂದುವರೆದು ಸದ್ರಿಯವರು ಆರೋಪಿತರು ಎರಡು ಹಾಜರಾತಿ ರಜಿಸ್ಟರಗಳನ್ನು ಮೆಂಟೆನ್ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಸದ್ರಿಯದನ್ನು ದಿಃ 13-02-2012 ರಂದು ಲಿಖಿತ ರೂಪದಲ್ಲಿ ಎಲ್ಲ ಸಿಬ್ಬಂದಿಯವರಿಗೂ ಕೊಟ್ಟಿರುತ್ತಾರೆ. ನೀವು ಹೇಳಿದ ಹಾಗೆ ಬಿಇಒ ರವರಿಂದ ಹಿಡಿದು ಕಮಿಷನವರವರೆಗೆ ಯಾವ ಅಧಿಕಾರಿಗಳೂ ಸಹ ಆರೋಪಿತರು ತಪ್ಪು ಮಾಡಿದ್ದಾರೆ ಎಂದು ವರದಿ ಕೊಟ್ಟಿಲ್ಲ  ಎಂದರೆ ಸರಿಯಲ್ಲ. ನೀವು ಹೇಳಿದ ಎರಡೆರಡು ರಜಿಸ್ಟರಗಳನ್ನು ಆರೋಪಿತರು ಮೆಂಟೆನ್ ಮಾಡಿರುತ್ತಾರೆ ಎಂಬುದನ್ನು ಆರೋಪಿತರ ಮೇಲೆ ವೈಷಮ್ಯ ಇದ್ದ ಕಾರಣ ನೀವೇ ಅವುಗಳನ್ನು ಸೃಷ್ಟಿಸಿ ಹಾಜರಪಡಿಸಿರುತ್ತಿರಿ ಎಂದು ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪನ್ನು ಎಸಗಿರುವುದಿಲ್ಲ ಎಂದು ಶಿಕ್ಷಣ ಇಲಾಖೆಯಿಂದ ವರದಿ ಬಂದಿದ್ದು ಕಂಡುಬಂದಿದ್ದರೂ ಸಹ ನೀವು ಅವರನ್ನು ಅಮಾನತುಗೊಳಿಸಿರುತ್ತಿರಿ ಎಂದರೆ ಸಾಕ್ಷಿಯು ಐದು ಸಿಬ್ಬಂದಿಯವರನ್ನು ದಿಃ 01-05-2010 ರಂದು 6 ತಿಂಗಳವರೆಗೆ ಅಮಾನತುಗೊಳಿಸಿರುತ್ತೇವೆ ಎಂದು ನುಡಿದಿರುತ್ತಾರೆ. ಸಾಕ್ಷಿಯು ಮುಂದುವರೆದು 50 ಪ್ರತಿಶತ ಸಂಬಳದೊಂದಿಗೆ ಅಮಾನತುಪಡಿಸಿರುತ್ತೇವೆ ಎಂದು ನುಡಿದಿರುತ್ತಾರೆ. ಆ ರೀತಿ ಸದ್ರಿ ಸಿಬ್ಬಂದಿಗಳನ್ನು ಅಮಾನತುಪಡಿಸಿ ಶಾಲೆಯಲ್ಲಿ ಸೇರಿಸಿಕೊಳ್ಳದೇ ಇದ್ದುದರಿಂದ ದಿಃ 28-06-2010 ರಂದು 3 ದಿನ ಕಾಲಾವಕಾಶ ನೀಡಿ ನಿಮ್ಮ ಆಡಳಿತ ಮಂಡಳಿಯವರಿಗೆ ಡಿಡಿಪಿಐ, ಶಿರಸಿ ರವರು ಕಾರಣ ಕೇಳಿ ನೋಟಿಸನ್ನು ಜಾರಿಗೊಳಿಸಿದ್ದರು ಎಂದರೆ ಸರಿಯಲ್ಲ. ಆ ನಂತರ ಬಿ.ಇ.ಒ. ಮುಂಡಗೋಡರವರೂ ಸಹ ನಿಮಗೆ ಸದ್ರಿ ವಿಷಯದ ಕುರಿತು ಕಾರಣ ಕೇಳಿ ನೋಟಿಸನ್ನು ಜಾರಿಗೊಳಿಸಿದ್ದರು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೇಳಿದ್ದು ಕಲ್ಪಿಸಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ .ಹೇ.ಕೇ. ಸರಿ ಇದೆ

Sd/-

ಪ್ರ.ದ.ನ್ಯಾ.ದಂ. ಮುಂಡಗೋಡ.